# ಮಂಗಳೂರು ವಿಶ್ವವಿದ್ಯಾನಿಲಯ

**ದಿನಾಂಕ 09.12.2019 ರಂದು ಪೂರ್ವಾಹ್ನ ಗಂಟೆ 11:00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2019ನೇ ಸಾಲಿನ ಏಳನೆಯ ಸಾಮಾನ್ಯ ಸಭೆಯ ನಡಾವಳಿಗಳು.**

**ಉಪಸ್ಥಿತ ಸದಸ್ಯರು:**

**ಅನುಪಸ್ಥಿತ ಸದಸ್ಯರು:**

## ಪ್ರಾರಂಭಿಕ

ಪ್ರಾರಂಭದಲ್ಲಿ ಮಾನ್ಯ ಕುಲಪತಿಯವರು ಎಲ್ಲಾ ಸದಸ್ಯರನ್ನು ಸಭೆಗೆ ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

1. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ದ ಪ್ರಕರಣ 28(1)(ಎಫ್) ರಂತೆ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾಗಿ ಮಾನ್ಯ ಕುಲಪತಿಗಳಿಂದ ನಾಮನಿರ್ದೇಶನಗೊಂಡಿರುವ ಶ್ರೀಮತಿ ಕಸ್ತೂರಿ ಜೆ. ಶೆಟ್ಟಿ, ಪ್ರಾಂಶುಪಾಲರು, ಶ್ರೀದೇವಿ ಕಾಲೇಜ್ ಆಫ್ ಫ್ಯಾಶನ್ ಡಿಸೈನ್, ಬಲ್ಲಾಳ್‌ಭಾಗ್, ಮಂಗಳೂರು ಇವರನ್ನು ಮಾನ್ಯ ಕುಲಪತಿಯವರು ಸಭೆಗೆ ಪರಿಚಯಿಸಿ ಸ್ವಾಗತಿಸಿದರು.

2. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ದ ಸೆಕ್ಷನ್ 28(1)(ಎಫ್) ರಂತೆ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾಗಿ ಮಾನ್ಯ ಕುಲಪತಿಗಳಿಂದ ನಾಮನಿರ್ದೇಶನಗೊಂಡಿದ್ದ ಶ್ರೀಮತಿ ಅರುಣಾ ಪಿ. ಕಾಮತ್, ಪ್ರಾಂಶುಪಾಲರು, ಎಸ್.ಡಿ.ಎಂ. ಕಾಲೇಜ್ ಆಫ್ ಬಿಸಿನೆಸ್ ಮ್ಯಾನೇಜ್‌ಮೆಂಟ್, ಮಂಗಳೂರು ಇವರ ಸದಸ್ಯತ್ವದ ಅವಧಿಯು ದಿನಾಂಕ 15.11.2019ರಂದು ಕೊನೆಗೊಂಡಿರುತ್ತದೆ. ಇವರು ತಮ್ಮ ಸಿಂಡಿಕೇಟ್ ಸದಸ್ಯತ್ವದ ಅವಧಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಸರ್ವತೋಮುಖ ಪ್ರಗತಿಗೆ ಹಾಗೂ ಉನ್ನತ ಶಿಕ್ಷಣದ ಸರ್ವಾಂಗೀಣ ಅಭಿವೃದ್ಧಿಗೆ ಪೂರಕ ಸಲಹೆ ಮತ್ತು ಸಹಕಾರಗಳನ್ನು ನೀಡಿರುವುದಕ್ಕಾಗಿ ಕೃತಜ್ಞತಾಪೂರ್ವಕವಾಗಿ ಅಭಿನಂದಿಸಲಾಯಿತು.

**I ನಡಾವಳಿಗಳ ದೃಢೀಕರಣ:**

ದಿನಾಂಕ 07.11.2019ರಂದು ನಡೆದ 2019ನೇ ಸಾಲಿನ ಸಿಂಡಿಕೇಟಿನ ಆರನೆಯ ಸಾಮಾನ್ಯ ಸಭೆಯ ನಡಾವಳಿಯನ್ನು ಈ ಕೆಳಗಿನ ತಿದ್ದುಪಡಿಯೊಂದಿಗೆ ದೃಢೀಕರಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾ.ಸ.6:48(2019)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಗಣಕಯಂತ್ರ ಕೇಂದ್ರದ ಕಂಪ್ಯೂಟರ್ ಅಪರೇಟರ್ ಹುದ್ದೆಯ ವೇತನ ಶ್ರೇಣಿಯನ್ನು ಪರಿಷ್ಕರಿಸುವ ಬಗ್ಗೆ.

**ನಿರ್ಣಯ:** 1986ರ ಕೇಂದ್ರ ವೇತನ ಶ್ರೇಣಿ ರೂ.1600–2990 ರಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮಂಗಳೂರು ವಿಶ್ವವಿದ್ಯಾನಿಲಯದ ಗಣಕಯಂತ್ರ ಕೇಂದ್ರದ ಕಂಪ್ಯೂಟರ್ ಅಪರೇಟರ್‌ಗಳ ವೇತನವನ್ನು ಅದಕ್ಕೆ ಸಮಾನವಾದ 1998ರ ರಾಜ್ಯ ವೇತನ ಶ್ರೇಣಿ ರೂ.5200–9580ಕ್ಕೆ ನಿಗದಿಪಡಿಸಲು ನಿರ್ಣಯಿಸಲಾಯಿತು.

**II ಅನುಸರಣಾ ವರದಿಯ ಅನುಮೋದನೆ:**

ದಿನಾಂಕ 23.09.2019 ರಂದು ನಡೆದ 2019ನೇ ಸಾಲಿನ ಸಿಂಡಿಕೇಟಿನ ಐದನೆಯ ಸಾಮಾನ್ಯ ಸಭೆಯ ನಿರ್ಣಯಯಗಳ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಯನ್ನು ಅನುಮೋದಿಸಲಾಯಿತು.

III ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು:

**ಕಾರ್ಯಸೂಚಿ ಸಂಖ್ಯೆ:** ಎಸಿಸಿ:ಸಾ.ಸ.7:01(2019)

**ವಿಷಯ:** ಸರಕಾರಿ ಪ್ರಥಮ ದರ್ಜೆ ಕಾಲೇಜು, ಮುನಿಯಾಲು ಎಂಬ ವಿದ್ಯಾ ಸಂಸ್ಥೆಯನ್ನು ಸ್ಥಳಾಂತರಿಸುವ ಬಗ್ಗೆ.

**ನಿರ್ಣಯ:** ಸರಕಾರಿ ಪ್ರಥಮ ದರ್ಜೆ ಕಾಲೇಜು, ಮುನಿಯಾಲು ಎಂಬ ವಿದ್ಯಾ ಸಂಸ್ಥೆಯನ್ನು ನೂತನ ಕಟ್ಟಡಕ್ಕೆ ಸ್ಥಳಾಂತರಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾ.ಸ.7:02(2019)

**ವಿಷಯ:** ಡಾ. ಪ್ರೀತಿ ಕೀರ್ತಿ ಡಿಸೋಜಾ, ಸಹಾಯಕ ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇವರು ದಿನಾಂಕ 18.11.2019 ರಿಂದ 19.11.2019ರವರೆಗೆ Skyline University College, Sharjah ಹಾಗೂ University of Dubai ಇಲ್ಲಿ ನಡೆಯಲಿರುವ International Conferenceನಲ್ಲಿ ಭಾಗವಹಿಸುವ ಕುರಿತು.

**ನಿರ್ಣಯ:** ಡಾ. ಪ್ರೀತಿ ಕೀರ್ತಿ ಡಿ'ಸೋಜಾ, ಸಹಾಯಕ ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇವರು ದಿನಾಂಕ 18.11.2019 ರಿಂದ 23.11.2019 ರವರೆಗೆ ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿ ಭಾಗವಹಿಸಲು ಅನುಮತಿ ಹಾಗೂ ಅಧಿಕೃತ ಕಾರ್ಯ ನಿಮಿತ್ತ ರಜೆ ಮಂಜೂರು ಮಾಡುವ ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾ.ಸ.7:03(2019)

**ವಿಷಯ:** UGC Faculty Recharge Programme ನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ನೇಮಕಗೊಂಡಿರುವ ಡಾ. ಕಿಶೋರ್ ಶ್ರೀಧರನ್ ಇವರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಿದ ಬಗ್ಗೆ.

**ನಿರ್ಣಯ:** ಡಾ. ಕಿಶೋರ್ ಶ್ರೀಧರನ್, UGC Faculty Recharge Programme – ಸಹಾಯಕ ಪ್ರಾಧ್ಯಾಪಕರು, ವಸ್ತು ವಿಜ್ಞಾನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರನ್ನು ವಿಶ್ವವಿದ್ಯಾನಿಲಯದ ಕರ್ತವ್ಯದಿಂದ ಬಿಡುಗಡೆಗೊಳಿಸಿದ ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾ.ಸ.7:04(2019)

**ವಿಷಯ:** ಡಾ. ದಶರಥ ಪಿ. ಅಂಗಡಿ, ಸಹ ಪ್ರಾಧ್ಯಾಪಕರು, ಭೂಗೋಳಶಾಸ್ತ್ರ ವಿಭಾಗ, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇವರನ್ನು ವಿಶ್ವವಿದ್ಯಾನಿಲಯದ ಆವರಣದಲ್ಲಿ ಸ್ನಾತಕೋತ್ತರ ಭೂಗೋಳಶಾಸ್ತ್ರ ಕೋರ್ಸಿಗೆ ನಿಯೋಜಿಸುವ ಬಗ್ಗೆ,

**ನಿರ್ಣಯ:** ಡಾ. ದಶರಥ ಪಿ. ಅಂಗಡಿ, ಸಹ ಪ್ರಾಧ್ಯಾಪಕರು, ಭೂಗೋಳಶಾಸ್ತ್ರ ವಿಭಾಗ, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇವರನ್ನು ವಿಶ್ವವಿದ್ಯಾನಿಲಯದ ಆವರಣದಲ್ಲಿ ಸ್ನಾತಕೋತ್ತರ ಭೂಗೋಳಶಾಸ್ತ್ರ ಕೋರ್ಸಿಗೆ ನಿಯೋಜಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾ.ಸ.7:05(2019)

**ವಿಷಯ:** UGC Faculty Recharge Programme ನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸಿದ ಡಾ. ಸುರೇಶ್ ಪಿ. ಎಸ್. ಇವರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಿದ ಬಗ್ಗೆ.

**ನಿರ್ಣಯ:** ಡಾ. ಸುರೇಶ್ ಪಿ. ಎಸ್., UGC Faculty Recharge Programme – ಸಹಾಯಕ ಪ್ರಾಧ್ಯಾಪಕರು, ಜೀವವಿಜ್ಞಾನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರನ್ನು ವಿಶ್ವವಿದ್ಯಾನಿಲಯದ ಕರ್ತವ್ಯದಿಂದ ಬಿಡುಗಡೆಗೊಳಿಸಿದ ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟ್:ಸಾ.ಸ.7:06(2019)

**ವಿಷಯ:** ಪದವಿ ಮಟ್ಟದ ತತ್ವಶಾಸ್ತ್ರ ಅಧ್ಯಯನ ಮಂಡಳಿಯನ್ನು ರಚಿಸುವ ಬಗ್ಗೆ.

**ನಿರ್ಣಯ:** ಪದವಿ ಮಟ್ಟದ ತತ್ವಶಾಸ್ತ್ರ ಅಧ್ಯಯನ ಮಂಡಳಿಯನ್ನು ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾ.ಸ.7:07(2019)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ವಿಭಾಗಗಳು/ ಕೋರ್ಸುಗಳು/ಕೇಂದ್ರಗಳು/ಘಟಕ ಕಾಲೇಜುಗಳಿಗೆ ಅಗತ್ಯವಿರುವ ಯುಪಿಯಸ್ ಮತ್ತು ಬ್ಯಾಟರಿಗಳನ್ನು ಧಾರಣಾ ಗುತ್ತಿಗೆ ದರ ನಿಗದಿಪಡಿಸಿ ಖರೀದಿಸುವ ಬಗ್ಗೆ.

**ನಿರ್ಣಯ:** ಧಾರಣಾ ಗುತ್ತಿಗೆ ಆಧಾರದಲ್ಲಿ ಯುಪಿಯಸ್ ಮತ್ತು ಬ್ಯಾಟರಿಗಳನ್ನು ಖರೀದಿಸುವ ಬಗ್ಗೆ ದಿನಾಂಕ 23.10.2019ರಂದು ನಡೆದ ಖರೀದಿ ಸಮಿತಿಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ:ಸಾ.ಸ.7:08(2019)

**ವಿಷಯ:** ಸಂಯೋಜಿತ ಕಾಲೇಜುಗಳಲ್ಲಿ ನಡೆಸಲಾಗುವ ಸ್ನಾತಕೋತ್ತರ ಕೋರ್ಸುಗಳಿಗೆ ಸರಕಾರಿ ಕೋಟಾದಡಿ ಪ್ರವೇಶಾತಿಗೊಂಡ ವಿದ್ಯಾರ್ಥಿಗಳ ಬೋಧನಾ ಶುಲ್ಕ ಮರುಪಾವತಿಗೆ ಸಂಬಂಧಿಸಿದಂತೆ ಮಹಾಲೇಖಪಾಲಕರು ಸಲ್ಲಿಸಿರುವ ಆಕ್ಷೇಪಣೆ.

**ನಿರ್ಣಯ:** ಸಂಯೋಜಿತ ಕಾಲೇಜುಗಳಲ್ಲಿ MSW ಸ್ನಾತಕೋತ್ತರ ಕೋರ್ಸುಗಳಿಗೆ ಹೆಚ್ಚಿನ ಶುಲ್ಕ ಪಡೆಯುತ್ತಿರುವ ಬಗ್ಗೆ ವಿದ್ಯಾರ್ಥಿಗಳಿಂದ ದೂರುಗಳು ಬಂದಿರುವ ಹಿನ್ನೆಲೆಯಲ್ಲಿ 21.10.2004ರ ಸಿಂಡಿಕೇಟ್ ಅನುಮೋದನೆ ಪ್ರಕಾರ ಸರ್ಕಾರಿ ಕೋಟಾದಡಿಯಲ್ಲಿ ಸಮಾಜ ಕಾರ್ಯ ಕೋರ್ಸುಗಳ ಬೋಧನಾ ಶುಲ್ಕ ವಿದ್ಯಾರ್ಥಿಗಳಿಂದ ಪಡೆದು ಆಯಾ ಕಾಲೇಜುಗಳಿಗೆ ಹಿಂತಿರುಗಿಸಲಾಗಿರುತ್ತದೆ. ತದನಂತರ ಮುಂದಿನ ವರ್ಷಗಳಲ್ಲಿ ಸಂಯೋಜಿತ ಕಾಲೇಜುಗಳಲ್ಲಿ ಇತರ ಸ್ನಾತಕೋತ್ತರ ಕೋರ್ಸುಗಳು ಪ್ರಾರಂಭವಾಗಿದ್ದು ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಹಾಗೂ ಕಾಲೇಜುಗಳು ಹೆಚ್ಚಿನ ಶುಲ್ಕ ಪಡೆಯದಂತೆ ಇತರ ಕೋರ್ಸುಗಳ ಶುಲ್ಕವನ್ನು ವಿಶ್ವವಿದ್ಯಾನಿಲಯ ಪಡೆದು ಬೋಧನಾ ಶುಲ್ಕವನ್ನು ಕಾಲೇಜುಗಳಿಗೆ ಹಿಂತಿರುಗಿಸಿರುತ್ತದೆ. ಆದರೆ ಇತರ ಕೋರ್ಸುಗಳಿಗೆ ಸಿಂಡಿಕೇಟ್ ಅನುಮೋದನೆ ಇಲ್ಲವೆಂದು ಮಹಾಲೇಖಪಾಲಕರು (ಆಡಿಟ್) ತಮ್ಮ ಆಡಿಟ್ ಆಕ್ಷೇಪಣೆಯ ವಿಚಾರಣಾ ಸಂಖ್ಯೆ:26 ದಿನಾಂಕ 16.10.2019ರಲ್ಲಿ ತಿಳಿಸಿರುತ್ತಾರೆ. ಆದುದರಿಂದ 2012–13 ರಿಂದ 2018–19ರ ವರೆಗೆ ಎಲ್ಲಾ ಸ್ನಾತಕೋತ್ತರ ಕೋರ್ಸುಗಳ ಬೋಧನಾ ಶುಲ್ಕ ಪಡೆದು ಸಂಬಂಧಿತ ಕಾಲೇಜುಗಳಿಗೆ ಹಿಂತಿರುಗಿಸಿರುವ ನಿರ್ಣಯವನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು ಹಾಗೂ ಈ ಬಗ್ಗೆ ಲೇಖಪಾಲಕರಿಗೆ ಪತ್ರ ಬರೆಯಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾ.ಸ.7:09(2019)

**ವಿಷಯ:** ಬಿ. ಎಡ್. ಪದವಿಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿ/ವಿದ್ಯಾರ್ಥಿನಿಗೆ ಪ್ರದಾನ ಮಾಡಲು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಲಾದ ಡಾ. ಟಿ.ಎಂ.ಎ. ಪೈ ಚಿನ್ನದ ಪದಕ ದತ್ತಿನಿಧಿಯ ಠೇವಣಿ ಮರು ಪಾವತಿಸುವ ಬಗ್ಗೆ.

**ನಿರ್ಣಯ:** ಸದರಿ ದತ್ತಿನಿಧಿ ಠೇವಣಿ ಹಿಂತಿರುಗಿಸುವ ಮೊದಲು ದತ್ತಿನಿಧಿ ಠೇವಣಿ ನಿಗದಿಪಡಿಸುವ ಬಗ್ಗೆ ಹಾಗೂ ಠೇವಣಿ ಮೊತ್ತ ಮತ್ತು ಪ್ರಸ್ತುತ ಇರುವ ಠೇವಣಿ ಹೆಚ್ಚಿಸುವ ಬಗ್ಗೆ ಹಾಗೂ ಮುಂದುವರಿಸುವ ಬಗ್ಗೆ, ಚಿನ್ನದ ಪದಕ ಹಾಗೂ ನಗದು ಬಹುಮಾನ ನೀಡುವ ಬಗ್ಗೆ ಅಥವಾ ಠೇವಣಿ ಹಿಂತಿರುಗಿಸುವ ಬಗ್ಗೆ ಅನುಶಾಸನ ರಚಿಸಲು ನಿರ್ಧರಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ:ಸಾ.ಸ.7:10(2019)

**ವಿಷಯ:** ಪ್ರಸಾದ್ ನೇತ್ರಾಲಯ, ಸೂಪರ್ ಸ್ಪೆಷಾಲಿಟಿ ಐ ಹಾಸ್ಪಿಟಲ್, ಮಹಾಕಾಳಿ ದೇವಸ್ಥಾನದ ಹತ್ತಿರ, ಪಂಪ್‌ವೆಲ್–ಉಜ್ಜೋಡಿ, ಮಂಗಳೂರು ಹಾಗೂ ಪ್ರಸಾದ್ ನೇತ್ರಾಲಯ, ಸೂಪರ್ ಸ್ಪೆಷಾಲಿಟಿ ಐ ಹಾಸ್ಪಿಟಲ್, ಶ್ರೀಕೃಷ್ಣ ಪ್ರಸಾದ್ ಕಟ್ಟಡ, ಎಂ. ಜಿ. ರೋಡ್ ಲಾಲ್‌ಬಾಗ್, ಮಂಗಳೂರು ಈ ಆಸ್ಪತ್ರೆಗಳನ್ನು ವೈದ್ಯಕೀಯ ವೆಚ್ಚ ಮರುಭರಣೆಗೆ ಮಂಗಳೂರು ವಿಶ್ವವಿದ್ಯಾನಿಲಯ ಪರಿಗಣಿಸಿದ ಆಸ್ಪತ್ರೆಗಳ ಪಟ್ಟಿಯಲ್ಲಿ ಸೇರಿಸುವ ಬಗ್ಗೆ.

**ನಿರ್ಣಯ:** ಪ್ರಸಾದ್ ನೇತ್ರಾಲಯದ ಶಾಖೆಗಳನ್ನು ಸರ್ಕಾರಿ ಪಟ್ಟಿಯಲ್ಲಿರುವ ಕಾರಣ ಮಂಗಳೂರು ವಿಶ್ವವಿದ್ಯಾನಿಲಯವು ವೈದ್ಯಕೀಯ ವೆಚ್ಚ ಮರುಭರಣೆಗೆ ಪರಿಗಣಿಸಿದ ಆಸ್ಪತ್ರೆಗಳ ಪಟ್ಟಿಯಲ್ಲಿ ಸೇರಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾ.ಸ.7:11(2019)

**ವಿಷಯ:** ಡಾ. ಭಾರತಿ ಪ್ರಕಾಶ್, ಸಹಾಯಕ ಪ್ರಾಧ್ಯಾಪಕರು, ಸೂಕ್ಷ್ಮಾಣು ಜೀವವಿಜ್ಞಾನ ವಿಭಾಗ, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇವರಿಗೆ Shiiki Hall in Kyushu University, Fukuoka, Japan ಇಲ್ಲಿ ನಡೆಯುವ International Conference ನಲ್ಲಿ ಭಾಗವಹಿಸಲು ಅನುಮತಿ ನೀಡುವ ಬಗ್ಗೆ.

**ನಿರ್ಣಯ:** ಸದರಿಯವರಿಗೆ 02.12.2019ರಿಂದ 10.12.2019ರವರೆಗೆ Shiiki Hall in Kyushu University, Fukuoka, Japan ಇಲ್ಲಿ ನಡೆಯುವ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ಅನುಮತಿ ನೀಡುವ ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ:ಸಾ.ಸ.7:12(2019)

**ವಿಷಯ:** Construction of Dr. B. R. Ambedkar Adyayana Kendra (Dr. B. R. Ambedkar Study Centre) at Mangalore University Mangalgangothri campus – ಅಂದಾಜು ಪಟ್ಟಿ ಅನುಮೋದನೆ ಬಗ್ಗೆ.

**ನಿರ್ಣಯ:** ಸದರಿ ಕಾಮಗಾರಿಯ ಹೆಸರನ್ನು Construction of Dr. B. R. Ambedkar Bhavana at Mangalore University Campus, Mangalagangothri ಎಂದು ತಿದ್ದುಪಡಿ ಮಾಡಿ ದಿನಾಂಕ 29.11.2019ರಂದು ನಡೆದ ಕಟ್ಟಡ ಸಮಿತಿ ಸಭೆಯ ನಿರ್ಣಯದಂತೆ ತಯಾರಿಸಲಾದ ಪರಿಷ್ಕೃತ ಅಂದಾಜು ಪಟ್ಟಿ ಮೊತ್ತ ರೂ.42,62,00,000.00ನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ:ಸಾ.ಸ.7:13(2019)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಪುರುಷರ ವಸತಿನಿಲಯಗಳಿಗೆ 40 ಕೆ.ಎಲ್.ಡಿ. ಸಾಮರ್ಥ್ಯದ STP (sewage Treatment Plant) ಒಳಚರಂಡಿ ವ್ಯವಸ್ಥೆಗಾಗಿ ಆರ್.ಸಿ.ಸಿ. ಟ್ಯಾಂಕ್ ನಿರ್ಮಾಣ ಕಾಮಗಾರಿ.

**ನಿರ್ಣಯ:** ಸದರಿ ಕಾಮಗಾರಿಗಾಗಿ ''ಪೋರ್ಟ್‌ಲ್ಯಾಂಡ್ ಸ್ಲ್ಯಾಗ್ ಸಿಮೆಂಟ್''ನ್ನು ಬಳಸಲು ನಿರ್ಣಯಿಸಿದ್ದು, ದಿನಾಂಕ 29.11.2019ರಂದು ನಡೆದ ಕಟ್ಟಡ ಸಮಿತಿಯ ಶಿಫಾರಸ್ಸಿನಂತೆ ರೂ.33,50,000.00 ಮೊತ್ತದ ಅಂದಾಜುಪಟ್ಟಿಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ:ಸಾ.ಸ.7:14(2019)

**ವಿಷಯ:** Construction of Boys Hostel Under SCP/TSP Grant Mangalore University, Mangalagangothri Campus.

**ನಿರ್ಣಯ:** SCP/TSP ಯೋಜನೆಯ ಅನುದಾನದಡಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇಲ್ಲಿ ನಿರ್ಮಾಣ ಮಾಡಲು ಉದ್ದೇಶಿಸಿರುವ ಪುರುಷರ ವಸತಿನಿಲಯದ ಕಾಮಗಾರಿಗೆ ದಿನಾಂಕ 29.11.2019ರಂದು ನಡೆದ ಕಟ್ಟಡ ಸಮಿತಿಯ ಶಿಫಾರಸ್ಸಿನಂತೆ ರೂ.6.00 ಕೋಟಿ ಮೊತ್ತದ ಅಂದಾಜುಪಟ್ಟಿಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ:ಸಾ.ಸ.7:15(2019)

**ವಿಷಯ:** Construction of Girls Hostel Under SCP/TSP Grant Mangalore University, Mangalagangothri Campus.

**ನಿರ್ಣಯ:** SCP/TSP ಯೋಜನೆಯ ಅನುದಾನದಡಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇಲ್ಲಿ ನಿರ್ಮಾಣ ಮಾಡಲು ಉದ್ದೇಶಿಸಿರುವ ಮಹಿಳೆಯರ ವಸತಿನಿಲಯದ ಕಾಮಗಾರಿಗೆ ದಿನಾಂಕ 29.11.2019ರಂದು ನಡೆದ ಕಟ್ಟಡ ಸಮಿತಿಯ ಶಿಫಾರಸ್ಸಿನಂತೆ ರೂ.6.00 ಕೋಟಿ ಮೊತ್ತದ ಅಂದಾಜುಪಟ್ಟಿಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ:ಸಾ.ಸ.7:16(2019)

**ವಿಷಯ:** Construction of Class Room ( including technologically enabled class rooms) for University College, Mangalore under component-9 of RUSA 2.0

**ನಿರ್ಣಯ:** ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿಗೆ ರೂಸಾ ಯೋಜನೆಯಡಿಯಲ್ಲಿ (Component-9) ನಿರ್ಮಾಣ ಮಾಡಲು ಉದ್ದೇಶಿಸಿರುವ ತರಗತಿ ಕೊಠಡಿ ನಿರ್ಮಾಣದ ಕಾಮಗಾರಿಗೆ ದಿನಾಂಕ 29.11.2019ರಂದು ನಡೆದ ಕಟ್ಟಡ ಸಮಿತಿಯ ಶಿಫಾರಸ್ಸಿನಂತೆ ರೂ.1.00 ಕೋಟಿ ಮೊತ್ತದ ಅಂದಾಜುಪಟ್ಟಿಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ:ಸಾ.ಸ.7:17(2019)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಕ್ಯಾಂಪಸ್‌ನಲ್ಲಿನ ಆಡಳಿತಸೌಧ, ಪುರುಷರ ವಸತಿನಿಲಯ ಹಾಗೂ ಅಧಿಕಾರಿಗಳ ವಸತಿಗೃಹಗಳ ಸಂಪರ್ಕ ರಸ್ತೆಗಳಿಗೆ ಡಾಮರು ನವೀಕರಣ ಕಾಮಗಾರಿ.

**ನಿರ್ಣಯ:** ಸದರಿ ಕಾಮಗಾರಿಗೆ ದಿನಾಂಕ 29.11.2019ರಂದು ನಡೆದ ಕಟ್ಟಡ ಸಮಿತಿಯ ಶಿಫಾರಸ್ಸಿನಂತೆ ರೂ.15,93,000.00 ಮೊತ್ತದ ಅಂದಾಜುಪಟ್ಟಿಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ:ಸಾ.ಸ.7:18(2019)

**ವಿಷಯ:** ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು ಉಜಿರೆ ಇಲ್ಲಿ ಶೈಕ್ಷಣಿಕ ವರ್ಷ 2019–20ನೇ ಸಾಲಿನಲ್ಲಿ ಪ್ರಾರಂಭಿಸಿರುವ B.Voc ಕೋರ್ಸುಗಳಿಗೆ ಸ್ವಾಯತ್ತ ಸ್ಥಾನಮಾನ ನೀಡುವ ಬಗ್ಗೆ.

**ನಿರ್ಣಯ:** ಉಜಿರೆಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು (ಸ್ವಾಯತ್ತ), ಈ ಸಂಸ್ಥೆಗೆ 1).Digital Media and Film making 2). Software and App Development ಮತ್ತು 3).Retail and Supply Chain Management ಎಂಬ ಮೂರು B.Voc. ಕೋರ್ಸುಗಳಿಗೆ ಸ್ವಾಯತ್ತ ಸ್ಥಾನಮಾನ ನೀಡುವ ಪ್ರಸ್ತಾವನೆಯನ್ನು (ಶೈಕ್ಷಣಿಕ ಮಂಡಳಿಯ ಅನುಮೋದನೆಯನ್ನು ಕಾಯ್ದಿರಿಸಿ) ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ:ಸಾ.ಸ.7:19(2019)

**ವಿಷಯ:** ಶೈಕ್ಷಣಿಕ ವರ್ಷ 2020–21ನೇ ಸಾಲಿಗೆ ಹೊಸ/ವಿಸ್ತರಣಾ/ಮುಂದುವರಿಕೆ/ಶಾಶ್ವತ ಸಂಯೋಜನೆ ಮಂಜೂರು ಮಾಡುವ ಬಗ್ಗೆ ಕಾಲೇಜುಗಳ/ ವಿದ್ಯಾಸಂಸ್ಥೆಗಳ ಪರಿಶೀಲನೆಗೆ ಸ್ಥಳೀಯ ವಿಚಾರಣಾ ಸಮಿತಿಯನ್ನು ರಚಿಸುವ ಬಗ್ಗೆ.

**ನಿರ್ಣಯ:** ಶೈಕ್ಷಣಿಕ ವರ್ಷ 2020–21ನೇ ಸಾಲಿಗೆ ಹೊಸ/ವಿಸ್ತರಣಾ/ಮುಂದುವರಿಕೆ/ಶಾಶ್ವತ ಸಂಯೋಜನೆ ಮಂಜೂರು ಮಾಡುವ ಬಗ್ಗೆ ಕಾಲೇಜುಗಳ/ ವಿದ್ಯಾಸಂಸ್ಥೆಗಳ ಪರಿಶೀಲನೆಗೆ ಸ್ಥಳೀಯ ವಿಚಾರಣಾ ಸಮಿತಿಯನ್ನು ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾ.ಸ.7:20(2019)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಗ್ರಂಥಾಲಯ– ಗ್ರಂಥಾಲಯದ ಪುಸ್ತಕ ಮತ್ತು ನಿಯತಕಾಲಿಕೆಗಳ ಬೈಂಡಿಂಗ್ ಮಾಡಿಸುವ ಪ್ರಸ್ತಾವನೆಗೆ ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ದಿನಾಂಕ 30.11.2019ರ ಖರೀದಿ ಸಮಿತಿಯ ಶಿಫಾರಸ್ಸಿನಂತೆ ಮಂಗಳೂರು ವಿಶ್ವವಿದ್ಯಾನಿಲಯದ ಗ್ರಂಥಾಲಯದಲ್ಲಿರುವ ಹಳೆಯ ಪುಸ್ತಕ ಮತ್ತು ನಿಯತಕಾಲಿಕೆಗಳನ್ನು ರೂ.4,89,700.00(ತೆರಿಗೆ ಸೇರಿ) ವೆಚ್ಚದಲ್ಲಿ ಬೈಂಡಿಂಗ್ ಮಾಡಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾ.ಸ.7:21(2019)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗ, ಸ್ನಾತಕೋತ್ತರ ಕೇಂದ್ರ ಮತ್ತು ಘಟಕ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುವ ಅತಿಥಿ ಉಪನ್ಯಾಸಕರಿಗೆ ಸೆಮಿಸ್ಟರ್ ಅಂತ್ಯದ ರಜಾ ಅವಧಿಯಲ್ಲಿ ಸಂಭಾವನೆ ಪಾವತಿ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗ, ಸ್ನಾತಕೋತ್ತರ ಕೇಂದ್ರ ಮತ್ತು ಘಟಕ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರಿಗೆ 2019–20ನೇ ಸಾಲಿನಿಂದ ಅನ್ವಯಿಸುವಂತೆ ಈಗಾಗಲೆ ಸರ್ಕಾರಿ ಕಾಲೇಜುಗಳಲ್ಲಿ ಇರುವಂತೆ ಸೆಮಿಸ್ಟರ್ ಮಧ್ಯಾವಧಿ ರಜಾ ಅವಧಿಗೆ ಮಾತ್ರ ಸಂಭಾವನೆ ನೀಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾ.ಸ.7:22(2019)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಬೋಧಕೇತರ ಹುದ್ದೆಗಳ (ಆಡಳಿತ, ಲಿಪಿಕ ಮತ್ತು ಇನ್ನಿತರ ಬೋಧಕೇತರ ಹುದ್ದೆಗಳ) ವೃಂದ ಮತ್ತು ನೇಮಕಾತಿ ನಿಯಮಗಳ ಕ್ರೋಡೀಕೃತ ಪರಿನಿಯಮದ ಅನುಮೋದನೆ ಬಗ್ಗೆ.

**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯದ ಬೋಧಕೇತರ ಹುದ್ದೆಗಳ (ಆಡಳಿತ, ಲಿಪಿಕ ಮತ್ತು ಇನ್ನಿತರ ಬೋಧಕೇತರ ಹುದ್ದೆಗಳ) ವೃಂದ ಮತ್ತು ನೇಮಕಾತಿ ನಿಯಮಗಳ ಕ್ರೋಡೀಕೃತ ಪರಿನಿಯಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ:ಸಾ.ಸ.7:23(2019)

**ವಿಷಯ:** ಮುಂದುವರಿಕೆ ಸಂಯೋಜನೆಯನ್ನು ನಿಯಂತ್ರಿಸುವ ಅನುಶಾಸನದ ತಿದ್ದುಪಡಿ ಬಗ್ಗೆ.

**ನಿರ್ಣಯ:** ಈಗಾಗಲೆ ಚಾಲ್ತಿಯಲ್ಲಿರುವ ಅನುಶಾಸನದ ಖಂಡಿಕೆ 25ರಲ್ಲಿ ಈ ಕೆಳಗಿನಂತೆ ಬದಲಾವಣೆ ಮಾಡಿ, ಖಂಡಿಕೆ 26ನ್ನು ಸೇರಿಸಿ ತಿದ್ದುಪಡಿ ಮಾಡಲು ನಿರ್ಧರಿಸಲಾಯಿತು.

24. In the case of application for introduction of new course/s or special subject/s, the fee will not be refunded if the application is withdrawn by the college.

25. If a college withdraws its application for affiliation except for those course/s referred to in 24, before the date notified for inspection, **90%** of the affiliation fee shall be refunded.

26. a). In case the affiliation committee visits the college and does not recommended for affiliation, then affiliation fee of 80% shall be refunded.

    b). In case the affiliation committee has recommended for affiliation but the Government denies affiliation then affiliation fees of 75% shall be refunded.

**ಕಾರ್ಯಸೂಚಿ ಸಂಖ್ಯೆ:** ಸಾರ್ವತ್ರಿಕ:ಸಾ.ಸ.7:24(2019)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಹಾಗೂ ಘಟಕ ಕಾಲೇಜುಗಳಲ್ಲಿರುವ ಸಭಾಂಗಣಗಳಿಗೆ, ಆಟದ ಮೈದಾನಗಳಿಗೆ ಹಾಗೂ ತರಗತಿ ಕೊಠಡಿಗಳಿಗೆ ಶುಲ್ಕ ನಿಗದಿಪಡಿಸುವ ಬಗ್ಗೆ.

**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯ ಹಾಗೂ ಘಟಕ ಕಾಲೇಜುಗಳಲ್ಲಿರುವ ಸಭಾಂಗಣಗಳಿಗೆ, ಆಟದ ಮೈದಾನಗಳಿಗೆ ಹಾಗೂ ತರಗತಿ ಕೊಠಡಿಗಳಿಗೆ ಶುಲ್ಕ ನಿಗದಿಪಡಿಸುವ ಬಗೆಗಿನ ಸಮಿತಿ ಸಭೆಯ ನಡಾವಳಿಯನ್ನು ಅನುಮೋದಿಸಲಾಯಿತು ಮತ್ತು ಕಾರ್ಯಕ್ರಮಗಳನ್ನು ವಿಶ್ವವಿದ್ಯಾನಿಲಯದ/ಕಾಲೇಜುಗಳ ಸಹಭಾಗಿತ್ವದಲ್ಲಿ ಆಯೋಜಿಸುವುದಾದರೆ ಸದರಿ ಸಭಾಂಗಣ/ಆಟದ ಮೈದಾನ ಹಾಗೂ ತರಗತಿ ಕೊಠಡಿಗಳನ್ನು ಉಚಿತವಾಗಿ ನೀಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ: ಸಾ.ಸ.7:25(2019)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಆರೋಗ್ಯ ಕೇಂದ್ರಕ್ಕೆ ಆಂಬ್ಯುಲೆನ್ಸ್ ವಾಹನವನ್ನು ಖರೀದಿಸುವ ಬಗ್ಗೆ.

**ನಿರ್ಣಯ:** ತುರ್ತು ಪರಿಸ್ಥಿತಿಗಳಲ್ಲಿ ಉಪಯುಕ್ತವಾಗುವಂತೆ Force ಮಾದರಿಯ ಆಂಬ್ಯುಲೆನ್ಸ್ ವಾಹನವನ್ನು ಖರೀದಿಸಲು ಸರ್ಕಾರದ ಅನುಮತಿ ಕೋರಲು ನಿರ್ಣಯಿಸಲಾಯಿತು. ವಿಶ್ವವಿದ್ಯಾನಿಲಯದ ಸಮೀಪದಲ್ಲಿ ಇರುವ ಆಸ್ಪತ್ರೆಗಳೊಂದಿಗೆ Critical Care ಆಂಬ್ಯುಲೆನ್ಸ್‌ನ್ನು ಬಳಸಿಕೊಳ್ಳುವ ಬಗ್ಗೆ ಒಡಂಬಡಿಕೆ ಮಾಡಿಕೊಳ್ಳಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ: ಸಾ.ಸ.7:26(2019)

**ವಿಷಯ:** Near Field Communication (NFC) ತಂತ್ರಜ್ಞಾನ ಆಧಾರಿತ ಮತ್ತು ಅಂಕೀಯವಾಗಿ ಸುರಕ್ಷಿತವಾಗಿರುವ (Digitally Secured) ಅಂಕಪಟ್ಟಿ ಹಾಗೂ ಪದವಿ ಪ್ರಮಾಣಪತ್ರಗಳನ್ನು ಮುದ್ರಿಸಿ ವಿಶ್ವವಿದ್ಯಾನಿಲಯಕ್ಕೆ ಸರಬರಾಜು ಮಾಡಲು M/s. Parjanya Paper Products ಇವರೊಂದಿಗೆ Memorandum of Understanding (MoU) ಮಾಡಿಕೊಂಡ ಬಗ್ಗೆ.

**ನಿರ್ಣಯ:** ಸದರಿ ಪ್ರಸ್ತಾವನೆಯಲ್ಲಿ ತಿಳಿಸಿರುವಂತೆ, ಸರ್ಕಾರದ ಜೂನ್, 2017ರ ಆದೇಶದ ಪ್ರಕಾರ Near Field Communication (NFC) ಆಧಾರಿತ ಪ್ರಮಾಣ ಪತ್ರ ಮತ್ತು ಅಂಕಪಟ್ಟಿಗಳನ್ನು ಮುದ್ರಿಸಲು ಟೆಂಡರ್ ಕರೆದು ನಿಯಮಾನುಸಾರ ಎಲ್ಲಾ ಪ್ರಕ್ರಿಯೆಗಳನ್ನು ಮುಗಿಸಿ M/s Parjanya Paper Productsರವರ ಜೊತೆ ಒಡಂಬಡಿಕೆ(MoU) ಮಾಡಲಾಗಿದ್ದು, ಒಡಂಬಡಿಕೆ ಪ್ರಕಾರ ಮುದ್ರಣ ಕಾರ್ಯ ನಡೆದಿರುತ್ತದೆ. ಆದರೆ ಸರ್ಕಾರ 10.11.2017ರಂದು ತಡೆ ಆದೇಶ ನೀಡಿದ್ದು ಆರಂಭಿಸಿದ ಕ್ರಮವನ್ನು ತಕ್ಷಣವೇ ಸ್ಥಗಿತಗೊಳಿಸುವಂತೆ ಸೂಚಿಸಲಾಗಿತ್ತು. ಆದರೆ ನಮ್ಮ ವಿಶ್ವವಿದ್ಯಾನಿಲಯದಲ್ಲಿ ಸರಕಾರದ ತಡೆಯಾಜ್ಞೆ ಬರುವ ಮೊದಲೇ ಎಲ್ಲಾ ಪ್ರಕ್ರಿಯೆಗಳು ಕಾನೂನಿನ ಪ್ರಕಾರ ಕ್ರಮಬದ್ಧವಾಗಿ ಮುಗಿದಿರುವುದರಿಂದ ಹಾಗೂ M/s Parjanya Paper Products ರವರ ಜೊತೆ ಒಡಂಬಡಿಕೆ(MoU) ಮಾಡಿರುವುದರಿಂದ ಸ್ಥಗಿತಗೊಳಿಸಿದಲ್ಲಿ ಕಾನೂನು ತೊಡಕುಗಳಾಗುವವು ಮತ್ತು ವಿದ್ಯಾರ್ಥಿಗಳಿಗೆ ತೊಂದರೆಯಾಗುತಿತ್ತು. ಆದುದರಿಂದ ಅವರು ಒಡಂಬಡಿಕೆ ಪ್ರಕಾರ Near Field Communication (NFC) ತಂತ್ರಜ್ಞಾನ ಆಧಾರಿತ ಅಂಕಪಟ್ಟಿ/ ಪದವಿ ಪ್ರಮಾಣಪತ್ರಗಳನ್ನು ಈಗಾಗಲೇ ಒದಗಿಸಿರುವುದರಿಂದ ಅಲ್ಲದೆ ಈ ಪದವಿ ಪತ್ರಗಳನ್ನು 36ನೇ ಘಟಿಕೋತ್ಸವದಲ್ಲಿ ಉಪಯೋಗಿಸಿರುವುದರಿಂದ, ಉಪಯೋಗಿಸಿದ ಹಾಗೂ ಮುಂದೆ ಉಪಯೋಗಿಸಲಿರುವ ಪದವಿ ಪ್ರಮಾಣ ಪತ್ರಗಳ ಬಿಲ್ಲಿನ ಹಣ ಪಾವತಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು: ಸಾ.ಸ.7:27(2019)

**ವಿಷಯ:** ಸ್ನಾತಕೋತ್ತರ ಇತಿಹಾಸ ಮತ್ತು ಪುರಾತತ್ವಶಾಸ್ತ್ರ ಸಂಯುಕ್ತ ಅಧ್ಯಯನ ಮಂಡಳಿಯನ್ನು ಪ್ರತ್ಯೇಕಿಸಿ ಪುನರ್ರಚಿಸುವ ಬಗ್ಗೆ.

**ನಿರ್ಣಯ:** ಸ್ನಾತಕೋತ್ತರ ಇತಿಹಾಸ ಮತ್ತು ಪುರಾತತ್ವಶಾಸ್ತ್ರ ಸಂಯುಕ್ತ ಅಧ್ಯಯನ ಮಂಡಳಿಯನ್ನು ಪ್ರತ್ಯೇಕಿಸಿ ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು: ಸಾ.ಸ.7:28(2019)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷರುಗಳ ನೇಮಕಾತಿ ಬಗ್ಗೆ.

**ನಿರ್ಣಯ:** ದಿನಾಂಕ 01.01.2020ರಿಂದ ಅನ್ವಯವಾಗುವಂತೆ ಎರಡು ವರ್ಷಗಳ ಅವಧಿಗಾಗಿ ಅಥವಾ ಮುಂದಿನ ಆದೇಶದವರೆಗೆ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷರುಗಳನ್ನು ಈ ಕೆಳಗಿನಂತೆ ನೇಮಕಾತಿ ಮಾಡಲು ನಿರ್ಣಯಿಸಲಾಯಿತು.

**ಕಲಾ ನಿಕಾಯ**

| ಕ್ರ. ಸಂ. | ಅಧ್ಯಯನ ವಿಭಾಗ | ಅಧ್ಯಕ್ಷರ ಹೆಸರು |
|---|---|---|
| 1. | ಸಮಾಜಶಾಸ್ತ್ರ ವಿಭಾಗ | ಪ್ರೊ. ವಿನಯ್ ರಜತ್ ಡಿ. |
| 2. | ಅರ್ಥಶಾಸ್ತ್ರ ವಿಭಾಗ | ಪ್ರೊ. ಶ್ರೀಪತಿ ಕಲ್ಲೂರಾಯ |
| 3. | ರಾಜ್ಯಶಾಸ್ತ್ರ ವಿಭಾಗ | ಪ್ರೊ. ಪಿ. ಎಲ್. ಧರ್ಮ |
| 4. | ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ | ಪ್ರೊ. ಪಿ. ಎಲ್. ಧರ್ಮ (ಪ್ರಭಾರ) ರಾಜ್ಯಶಾಸ್ತ್ರ ವಿಭಾಗ |

**ವಾಣಿಜ್ಯ ನಿಕಾಯ**

| ಕ್ರ. ಸಂ. | ಅಧ್ಯಯನ ವಿಭಾಗ | ಅಧ್ಯಕ್ಷರ ಹೆಸರು |
|---|---|---|
| 1. | ವ್ಯವಹಾರ ಆಡಳಿತ ವಿಭಾಗ | ಡಾ. ಪುಟ್ಟಣ್ಣ ಕೆ.<br>ಸಹ ಪ್ರಾಧ್ಯಾಪಕರು |
| 2. | ವಾಣಿಜ್ಯ ವಿಭಾಗ | ಡಾ. ವೇದವ ಪಿ.<br>ಸಹ ಪ್ರಾಧ್ಯಾಪಕರು |

**ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ**

| ಕ್ರ. ಸಂ. | ಅಧ್ಯಯನ ವಿಭಾಗ | ಅಧ್ಯಕ್ಷರ ಹೆಸರು |
|---|---|---|
| 1. | ಅನ್ವಯಿಕ ಸಸ್ಯಶಾಸ್ತ್ರ ವಿಭಾಗ | ಪ್ರೊ. ರಾಜು ಕೃಷ್ಣ ಚಲ್ಲನ್ನವರ್ |
| 2. | ಸಂಖ್ಯಾಶಾಸ್ತ್ರ ವಿಭಾಗ | ಪ್ರೊ. ದೊರೆಸ್ವಾಮಿ (ಪ್ರಭಾರ)<br>ಗಣಕ ವಿಜ್ಞಾನ ವಿಭಾಗ |
| 3. | ಗಣಿತಶಾಸ್ತ್ರ ವಿಭಾಗ | ಶ್ರೀ ಮೋಹನ್ ಕೆ. ಎಸ್.<br>ಸಹಾಯಕ ಪ್ರಾಧ್ಯಾಪಕರು |
| 4. | ಸಾಗರ ಭೂ ವಿಜ್ಞಾನ ವಿಭಾಗ | ಪ್ರೊ. ಶಿವಣ್ಣ ಕೆ. |
| 5. | ಮಾನವ ಪ್ರಜ್ಞೆ ಮತ್ತು ಯೋಗ ವಿಜ್ಞಾನ ವಿಭಾಗ | ಪ್ರೊ. ಕೆ. ಕೃಷ್ಣ ಶರ್ಮ |
| 6. | ಗಣಕ ವಿಜ್ಞಾನ ವಿಭಾಗ | ಪ್ರೊ. ಬಿ. ಹೆಚ್. ಶೇಖರ್ |
| 7. | ಇಲೆಕ್ಟ್ರಾನಿಕ್ಸ್ ವಿಭಾಗ | ಪ್ರೊ. ನವೀನ್ ಕುಮಾರ್ ಎಸ್. ಕೆ. |
| 8. | ಸೂಕ್ಷ್ಮಾಣುಜೀವ ವಿಜ್ಞಾನ ವಿಭಾಗ,<br>ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ | ಡಾ. ಐ. ಕೆ. ಮಂಜುಳಾ |
| 9. | ಜೀವ ರಸಾಯನಶಾಸ್ತ್ರ ವಿಭಾಗ<br>ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ | ಡಾ. ಕೆ. ಎಸ್. ಚಂದ್ರಶೇಖರಯ್ಯ<br>ಸಹ ಪ್ರಾಧ್ಯಾಪಕರು |

**ಶಿಕ್ಷಣ ನಿಕಾಯ**

| ಕ್ರ. ಸಂ. | ಅಧ್ಯಯನ ವಿಭಾಗ | ಅಧ್ಯಕ್ಷರ ಹೆಸರು |
|---|---|---|
| 1. | ದೈಹಿಕ ಶಿಕ್ಷಣ ಮತ್ತು ಕ್ರೀಡಾ ಅಧ್ಯಯನ ವಿಭಾಗ | ಡಾ. ಜೆರಾಲ್ಡ್ ಸಂತೋಷ್ ಡಿ'ಸೋಜ |

**ಕಾರ್ಯಸೂಚಿ ಸಂಖ್ಯೆ:** ಎಸಿಸಿ:ಸಾ.ಸ.7:29(2019)

**ವಿಷಯ:** Submission of Synopsis by Prof. P. Sripathi Tantri for the award of D.Litt. degree by Mangalore University.

**ನಿರ್ಣಯ:** ಸದರಿಯವರ D.Litt. ಅರ್ಜಿಯನ್ನು ಒಪ್ಪಲಾಗಿ, ಸಮಾಜಶಾಸ್ತ್ರ ಅಧ್ಯಯನ ಮಂಡಳಿಗೆ ಶಿಫಾರಸ್ಸು ಮಾಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:**ಸಾ.ಸ.7:30(2019)

**ವಿಷಯ:** ಘಟಕ ಕಾಲೇಜಿನ ಬೋಧಕ ಸಿಬ್ಬಂದಿಗಳ ವರ್ಗಾವಣೆ ಬಗ್ಗೆ.

**ನಿರ್ಣಯ:** ಡಾ. ಬಿ. ಸೀತರಾಮ ಕಡಮಣ್ಣಾಯ, ಸಹ ಪ್ರಾಧ್ಯಾಪಕರು, ಪ್ರಾಣಿಶಾಸ್ತ್ರ ವಿಭಾಗ, ಫೀಲ್ಡ್ ಮಾರ್ಷಲ್ ಕೆ. ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ ಇವರನ್ನು NAAC ಸಮಿತಿಯ ಭೇಟಿಯ ನಂತರ ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿಗೆ ನಿಯೋಜನೆ ಮಾಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ: ಸಾ.ಸ.7:31(2019)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ 2020ನೇ ಸಾಲಿನ ಡೈರಿ, ಕ್ಯಾಲೆಂಡರ್, ಟೆಲಿಫೋನ್ ಡೈರೆಕ್ಟರಿ ಮುದ್ರಣದ ಕುರಿತು.

**ನಿರ್ಣಯ:** ಖರೀದಿ ಸಮಿತಿಯ ನಿರ್ಣಯದಂತೆ 2020ನೇ ಸಾಲಿನ ಡೈರಿ, ಕ್ಯಾಲೆಂಡರ್, ಟೇಬಲ್ ಕ್ಯಾಲೆಂಡರ್ ಮತ್ತು ಎಕ್ಸಿಕೆಟಿವ್ ಡೈರಿಗಳನ್ನು ಮುದ್ರಣ ಮಾಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಇತರ ವಿಷಯಗಳು:**

ಮಾನ್ಯ ಕುಲಪತಿಗಳು ಜನವರಿ 2020ರಲ್ಲಿ ಘಟಿಕೋತ್ಸವ ನಡೆಸುವ ಬಗ್ಗೆ ಪ್ರಸ್ತಾಪಿಸುತ್ತಾ, ಗೌರವ ಡಾಕ್ಟರೇಟ್ ನೀಡುವ ಬಗ್ಗೆ ಹೆಸರುಗಳನ್ನು ಪ್ರಸ್ತಾಪಿಸಿದರು. ಇತರ ಸದಸ್ಯರು ಎಲ್ಲಾ ಮಹನೀಯರುಗಳ ವ್ಯಕ್ತಿಪರಿಚಯದ ಬಗ್ಗೆ ಚರ್ಚಿಸಿ, ಒಟ್ಟು ಆರು ಹೆಸರುಗಳನ್ನು ವಿಶ್ವವಿದ್ಯಾನಿಲಯದ ಕುಲಾಧಿಪತಿಗಳು ಹಾಗೂ ಕರ್ನಾಟಕದ ಸನ್ಮಾನ್ಯ ರಾಜ್ಯಪಾಲರಿಗೆ ಶಿಫಾರಸ್ಸು ಮಾಡಲು ನಿರ್ಣಯಿಸಲಾಯಿತು.

ಮಾನ್ಯ ಕುಲಪತಿಯವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಿ/-
ಕುಲಸಚಿವರು

ಸಹಿ/-
ಕುಲಪತಿಗಳು